
# CULTURAL HERITAGE OF KARNATAKA

## NATIONAL SEMINAR

Sponsored by :
**Department Of Heritage and Museum Mysore**

# PROCEEDING

Organized Department Of History :
**V.M.K.S.R. Vastrad Arts, Science &**
**V. S. Bellihal Commerce, College, Hungund**



**Prof. S. R. Nagannavar**
Editor

**Prof. (Smt) S. K. Math**
Cheif Editor & Principal

Scanned with OKEN Scanner

**Published by**
V.M.V.V.Sangha's
V.M.S.R.Vastrad Arts, Science &
V.S.Bellihal Commerce College, Hungund

**Editor**
Prof. S.R.Nagannavar
Assistant Professor
Department of History
V.M.S.R.Vastrad Arts, Science &
V.S.Bellihal Commerce College, Hungund

**Publisher**
Manasollas Publication, Hungund

Date : 22th Febuary, 2020

ISBN-978-93-5396-161-9

Rs : 120/-

The publication of the proceedings was financially supported by UGC and the responsibility for the facts stated, opinions expressed and conclusions reached is entirely that of author / authors of the articles. V.M.KS.R.Vastrad Arts, Science & V.S.Bellihal Commerce College, Hungund accepts no responsibility.

Printed at :
Mallikarjun Graphics
Main Bazar Opp. Maruti Temple, Hungund-587 118
Tel. : 9945196601

Scanned with OKEN Scanner

Title- Growth of Shaiva Sect in the Backdrop of inscriptions During Period of Hoysala Ballal-II
- Dr. S. R. Nagannavar

# ಹೊಯ್ಸಳ ಎರಡನೆಯ ಬಲ್ಲಾಳನ ಕಾಲದ ಶಾಸನಗಳ ಹಿನ್ನೆಲೆಯಲ್ಲಿ ಶೈವಧರ್ಮದ ಬೆಳವಣಿಗೆ

ಪ್ರೊ. ಎಸ್. ಆರ್. ನಾಗಣ್ಣವರ
ಸಹಾಯಕ ಪ್ರಾಧ್ಯಾಪಕರು
ವಿ.ಎಂ. ಪದವಿ ಮಹಾವಿದ್ಯಾಲಯ, ಹುನಗುಂದ

**ಪ್ರಸ್ತಾವನೆ :**

ಕನ್ನಡ ನಾಡನ್ನು ಆಳಿಹೋದ ಅರಸು ಮನೆತನಗಳಲ್ಲಿ ಎದ್ದು ಕಾಣುವ ಮತ್ತೊಂದು ಶ್ರೇಷ್ಠ ಮನೆತನವೇ ದೋರಸಮುದ್ರದ ಹೊಯ್ಸಳರು. ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಆಳ್ವಿಕೆಯನ್ನಾರಂಭಿಸಿದ ಹೊಯ್ಸಳರು ವಿಷ್ಣುವರ್ಧನನ ಕಾಲದಲ್ಲಿ ಕಲ್ಯಾಣದ ಚಾಲುಕ್ಯ ಅರಸನಾದ ಮೂರನೆಯ ಸೋಮೇಶ್ವರನನ್ನು ಪರಾಭವಗೊಳಿಸುವುದರ ಮೂಲಕ ಸ್ವತಂತ್ರ್ಯ ಆಳ್ವಿಕೆಯನ್ನು ಆರಂಭಿಸಿ 1346 ರವರೆಗೆ ವೈಭವದಿಂದ ರಾಜ್ಯಭಾರ ನಿರ್ವಹಿಸಿದರು. ಈ ಅರಸರು ಜೈನ ಮತಾವಲಂಭಿಯಾಗಿದ್ದರೂ ಶೈವ, ವೈಷ್ಣವ ಧರ್ಮಗಳನ್ನೂ ಕಡೆಗಣಿಸಿರಲಿಲ್ಲ. ಸರ್ವಧರ್ಮ ಸಮನ್ವಯ ದೊರೆಗಳಾಗಿದ್ದ ಈ ಮನೆತನದ ಅರಸರನ್ನು ಚತುಸ್ಸಮಯ ಸಮುದ್ಧರಣ ಎಂಥಲೂ ಕರೆಯುತ್ತಿದ್ದರು. ಹೊಯ್ಸಳರ ಪ್ರಸಿದ್ಧ ಅರಸರಲ್ಲಿ ಎರಡನೆಯ ಬಲ್ಲಾಳನ ಕಾಲವನ್ನು ಸಾಂಸ್ಕೃತಿಕ ಬೆಳವಣಿಗೆಯ ಕಾಲವೆಂದು ಕರೆದರೆ ಅತಿಶಯೋಕ್ತಿಯಾಗಲಾರದು. ಎರಡನೆಯ ಬಲ್ಲಾಳನ ಕಾಲದಲ್ಲಿ ಶೈವಧರ್ಮವೂ ಪ್ರಗತಿಪಥದತ್ತ ನಡೆದಿತ್ತು ಎಂಬುದನ್ನು ಶಾಸನಗಳ ಹಿನ್ನೆಲೆಯಲ್ಲಿ ತಿಳಿಸಲು ಈ ಸಂಶೋಧನಾ ಪ್ರಬಂಧದ ಮೂಲಕ ಪ್ರಯತ್ನಿಸುವೆ.

**ಶೈವ ಧರ್ಮದ ಉಗಮ ಮತ್ತು ಬೆಳವಣಿಗೆ :**

ಒಂದಾಗಿಹವೈದು ಭೂತ, ಚಂದ್ರಸೂರ್ಯ ನಂದಿವಾಹನ ನಿಮ್ಮ ತನುವಲ್ಲವೇ?
ನಿಂದು ನೋಡಲು ಜಗಭರಿತವಾಗಿಪ್ಪೆ
ಇನ್ನು ನೋಯಿಸುವೆನಾರಯ್ಯ ರಾಮನಾಥ

ಎಂಬ ದೇವರ ದಾಸಿಮಯ್ಯನ ಈ ವಚನದ ಮೂಲಕ ಸಾವಿರಾರು ವರ್ಷದ ಪ್ರಾಚೀನ ಇತಿಹಾಸವನ್ನು ಅರ್ಥೈಸುವಂತಿರುವ ಈ ಸಾಲುಗಳು ಕಾಳಿದಾಸ ವಿರಚಿತ

'ಅಭಿಜ್ಞಾನ ಶಾಕುಂತಲಾ' ನಾಟಕ ಸಾಹಿತ್ಯದಲ್ಲಿ ಪಂಚಭೂತಗಳು, ಸೂರ್ಯಚಂದ್ರರು ಶಿವನ ಪ್ರತ್ಯೇಕ್ಷ ಅವಯವಗಳು ಎಂಬುದನ್ನು ಕೃತಿಯ ಆರಂಭಿಕ ಪದ್ಯದ ಮೂಲಕ ಗುರುತಿಸಿದ್ದಾನೆ. [**ಕರ್ನಾಟಕ ಚರಿತ್ರೆ ಸಂಪುಟ–07. ಪುಟ–11**] ಆ ಹಿನ್ನೆಲೆಯಲ್ಲಿ ಶೈವ ಧರ್ಮವು ಅತ್ಯಂತ ಪ್ರಾಚೀನ ಪರಂಪರೆಯನ್ನು ಹೊಂದಿದ ಧರ್ಮವಾಗಿದೆ.

ಶೈವ ಧರ್ಮಕ್ಕೆ ತನ್ನದೇ ಆದ ಪ್ರಾಚೀನತೆ ಇದೆ. ಧರ್ಮ ಎಂಬುದು ಲ್ಯಾಟಿನ ಭಾಷೆಯ 'ರಿಲಿಗೋ' ಎಂಬ ಪದವು ಆಂಗ್ಲ ಭಾಷೆಯ 'ರಿಲೀಜನ್' ಎಂಬ ಪದವು ನಿಷ್ಪನ್ನವಾಗಿದೆ. ಇದರ ಸಮಾನವಾದ ಕನ್ನಡ ಅರ್ಥವೇ 'ಧರ್ಮ' ಧರ್ಮದ ಬೆಳವಣಿಗೆಯ ಪ್ರಾಚೀನ ಇತಿಹಾಸವನ್ನು ಅವಲೋಕಿಸಿದಾಗ ಕನ್ನಡ ನಾಡಿನಲ್ಲಿ ಹಲವಾರು ಧರ್ಮಗಳು ಬೆಳವಣಿಗೆಯನ್ನು ಕಂಡು ತಮ್ಮದೇ ಆದ ಛಾಪು ಮೂಡಿಸಿರುವಂತೆ ಶೈವಧರ್ಮವೂ ಅದಕ್ಕೆ ಹೊರತಾಗಿಲ್ಲ. ಶೈವ ಧರ್ಮವು ಪ್ರಾಚೀನ ಪರಂಪರೆಯನ್ನು ಹೊತ್ತುಕೊಂಡು ಬೆಳೆದುಕೊಂಡು ಬಂದಿರುವ ಧರ್ಮವಾಗಿದೆ. ಈ ಧರ್ಮದ ಆರಂಭದ ನೆಲೆಯನ್ನು ಕಂಡು ಹಿಡಿಯುವುದು ಕಠಿಣವಾದರೂ ಹರಪ್ಪಾ ಸಂಸ್ಕೃತಿಯೇ ಈ ಧರ್ಮ ಆರಂಭದ ನೆಲೆ ಎಂದೆನ್ನಬಹುದು. ಈ ಮಾತಿಗೆ ಪೂರಕ ಆಧಾರವೆಂದರೆ ಹರಪ್ಪಾ ಮತ್ತು ಮೆಹೆಂಜೊದಾರೋ ನಗರಗಳ ಉತ್ಖನನಗಳ ಸಂದರ್ಭದಲ್ಲಿ ಪತ್ತೆಯಾಗಿರುವ ಸುಟ್ಟ ಮಣ್ಣಿನ ಹಲವಾರು ಅವಶೇಷಗಳು ಶಿವಲಿಂಗವನ್ನು ಹೋಲುವಂತಿವೆ. ಅಲ್ಲದೇ ಇದೇ ನಾಗರೀಕತೆಯ ನೆಲೆಗಳಲ್ಲಿ ಕಂಡುಬಂದಿರುವ ಮುದ್ರೆಗಳಲ್ಲಿ ಕೊಂಬುಗಳನ್ನು ಹೊಂದಿರುವ ಒಬ್ಬ ವ್ಯಕ್ತಿಯು ಗಿಡದ ಕೆಳಭಾಗದಲ್ಲಿ ಆಶೀನನಾಗಿರುವಂತೆ ಚಿತ್ರಿಸಿದ ಚಿತ್ರಗಳನ್ನು ಗುರುತಿಸಿದ ಇತಿಹಾಸಕಾರರು ಇದು ಪಶುಪತಿಯ ಚಿತ್ರವೆಂದು ತಿಳಿಸಿದ್ದಾರೆ. ಆದುದರಿಂದ ಅಂದಿನ ನಾಗರೀಕರು ಶಿವನ ಆರಾಧಕರಾಗಿದ್ದರು ಎಂದು ತಿಳಿಯಬಹುದಾಗಿದೆ. **(1. ಲಾಲ ಬಿ. ಬಿ.– ದಿ ಸರಸ್ವತಿ ಫ್ಲೋಜ ಆನ್ ದಿ ಕಂಟಿನ್ಯುಟಿ ಆಫ್ ಇಂಡಿಯನ್ ಕಲ್ಚರ್–ಪು–117)**

ಪೂರ್ವ ವೇದಕಾಲದ ಕೃತಿಯಾದ ಋಗ್ವೇದ ಸಂಹಿತೆಯ ಮೂರು ಸೂಕ್ತಗಳಲ್ಲಿ 75 ಬಾರಿ 'ರುದ್ರ' ಎಂಬ ಪದದ ಬರಹ ಇರುವುದರಿಂದ ಮತ್ತು ರುದ್ರನೇ ಶಿವ ಎಂಬ ದಾಖಲೆಯೂ ಕಂಡುಬಂದಿರುವುದು. ಉತ್ತರ ವೇದಕಾಲದ ಸಾಹಿತ್ಯವಾದ ಅಥರ್ವಣ ವೇದದಲ್ಲಿ ರುದ್ರನನ್ನು ಮಹಾದೇವ, ಸದಾಶಿವ ಎಂದು ದಾಖಲಿಸಲಾಗಿದೆ. **(2. ಚಟ್ಟೋಪಾಧ್ಯಾಯ ಸುಧಾಕರ : ಎವೂಲ್ಯೂಸನ್ ಆಫ್ ಎ ಹಿಂದೂ ಸೆಕ್ಟ್–ಪು–92).**

ಪುರಾಣಗಳಾದ ವಾಯುಪುರಾಣ, ಲಿಂಗಪುರಾಣಗಳಲ್ಲಿ ಶೈವ ಶಾಖೆಗಳಾದ ಲಕುಳೀಶ ಶಾಖೆಯ ಉದಯದ ಕುರಿತಾದ ದಾಖಲಾಗಿವೆ. ಇದೇ ಪುರಾಣಗಳು ಶಿವನ 28ನೇ ಅವತಾರದಲ್ಲಿ ಲಕುಳೀಶನು ಕಂಡುಬಂದಿರುವನು ಎಂದಿದ್ದರೆ, ವಾಯುಪುರಾಣ, ಲಿಂಗಪುರಾಣ, ಕೂರ್ಮಪುರಾಣಗಳಲ್ಲಿ ಪಾಶುಪತ ಶೈವ ಶಾಖೆಯ ಮಾಹಿತಿಯು ದೊರೆಯುತ್ತದೆ.

ಮಹಾಭಾರತ ಮಹಾಕಾವ್ಯ ಕೃತಿಯಲ್ಲಿ ಕಿರಾತಕನ ವೇಷದಲ್ಲಿ ಬಂದ ಶಿವನಿಗೂ ಮತ್ತು ಅರ್ಜುನನಿಗೂ ಹಂದಿಯನ್ನು ಕೊಂದು ಹಾಕಬೇಕು ಎನ್ನುವ ವಿಚಾರದಲ್ಲಿ ಹೋರಾಟ ನಡೆದು ಅಂತಿಮ ಘಟನೆಯಲ್ಲಿ ಅರ್ಜುನನು ಪರಾಭವಗೊಂಡಾಗ ಶಿವನು ಪತ್ನಿ ಪಾರ್ವತಿ ಯೊಂದಿಗೆ ಸಾಕ್ಷಾತ್ಕಾರವಾಗಿ ಅರ್ಜುನನ ಪರಾಕ್ರಮವನ್ನು ಮೆಚ್ಚಿ ಅವನಿಗೆ 'ಪಾಶುಪತಾಸ್ತ್ರ'ವನ್ನು ದಯಪಾಲಿಸಿದ ಮಾಹಿತಿಯನ್ನು ಕಾಣಬಹುದಾಗಿದೆ. **(4ಕಡಪಟ್ಟಿ ಎಂ.ಎನ್. ಪ್ರಾಚೀನ ಕರ್ನಾಟಕದಲ್ಲಿ ಶೈವ ಧರ್ಮ –ಪು–14)** ಮಹಾಭಾರತದ ಶಾಂತಿಪರ್ವದಲ್ಲಿ 'ಪಾಶುಪತ' ಶೈವ ಶಾಖೆಯ ಕುರಿತಾಗಿ ಮೊದಲ ಬಾರಿಗೆ ಮಾಹಿತಿ ದೊರೆಯುವುದು. ಈ ಸಿದ್ದಾಂತದ ಪ್ರಕಾರ ಶಿವನೇ ತನ್ನ ಮೊದಲಗುರು ಎನ್ನಲಾಗಿದೆ. ಲಕುಲೀಶನು ಪಾಶುಪಥ ಧರ್ಮವನ್ನು ಸ್ಥಾಪಿಸಿದನೆಂದು ನಂಬಲಾಗಿದೆ. ಆದುದರಿಂದ ಈ ಪಂಥವನ್ನು ಲಕುಲೀಶ ಪಾಶುಪಥವೆಂದು ಕರೆಯಲಾಗಿದೆ. (ಅದೇ, ಪು–18)

ಅರಸು ಮನೆತನಗಳ ಯುಗಕ್ಕೆ ಬಂದರೆ ಮೌರ್ಯರ ಕಾಲದಿಂದ ಕಲ್ಯಾಣದ ಕಲಚೂರಿಗಳ ಕಾಲದವರೆಗೆ ಹಲವಾರು ಅರಸರು ಹೊರಡಿಸಿದ ಶಾಸನಗಳು, ನಿರ್ಮಿಸಿದ ದೇವಾಲಯಗಳು, ನಿಲ್ಲಿಸಿದ ಸ್ಥಂಭಗಳು, ರಚಿತವಾದ ಸಾಹಿತ್ಯ ಕೃತಿಗಳು ಶೈವ ಧರ್ಮದ ಕುರಿತಾಗಿ ವಿವರವಾದ ಮಾಹಿತಿಯನ್ನು ಕೊಡುತ್ತವೆ. ಶಾಸನವೊಂದರ ಪ್ರಕಾರ ಶಾತವಾಹನ ದೊರೆಯೋರ್ವನು ತಾಳಗುಂದದ ಪ್ರಣವೇಶ್ವರ ದೇವರ ಆರಾಧಕನಾಗಿದ್ದನೆಂಬುದು ತಿಳಿದುಬರುತ್ತದೆ. ಅಲ್ಲದೆ ಈ ಮನೆತನದ ವಾಶಿಷ್ಠಪುತ್ರ ಪುಲಮಾವಿಯು ಹೊರಡಿಸಿದ ಗದಗ ಜಿಲ್ಲೆಯ ನರಗುಂದ ತಾಲೂಕಿನ ವಾಸನ ಗ್ರಾಮದಲ್ಲಿ ದೊರೆತಿದ್ದು, ಆ ಶಾಸನದಲ್ಲಿ 'ದೇವಾಯತನವಾಸಿ ಮಹಾದೇವ ಚಂಡಶಿವಸ' ಎಂಬ ಉಲ್ಲೇಖವಿದೆ. ಇದರಿಂದ ಚಂಡಶಿವ ಎನ್ನುವ ಹೆಸರು ಶಾತವಾಹನ ಅರಸ ಚಂಡಶಾತಕರ್ಣಿಯನ್ನು ಸ್ಮರಿಸುವಂತಿದೆ. ಅವನ ಹೆಸರಿನಲ್ಲಿಯೇ ಶಿವಲಿಂಗ ಸ್ಥಾಪಿಸಿರಬಹುದು ಎಂಬುದು ವಿದ್ವಾಂಸರ ಅಭಿಮತ.[6] (ಅದೇ–ಪು–33)

ಬನವಾಸಿಯ ಕದಂಬ ಅರಸ ಕಾಕುತ್ಸವರ್ಮನು ಹೊರಡಿಸಿದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ತಾಳಗುಂದ ಗ್ರಾಮದಲ್ಲಿ ದೊರೆತಿರುವ ಶಾಸನವು ನಮಃ ಶಿವಾಯ ಎಂಬ ಪಂಚಾಕ್ಷರಿ ಮಂತ್ರದಿಂದ ಆರಂಭವಾಗಿರುವುದು ಅವರು ಶೈವ ಧರ್ಮದ ಆರಾಧಕರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಪಂಚಾಕ್ಷರಿ ಮಂತ್ರದೊಂದಿಗೆ ಬರೆಯಲ್ಪಟ್ಟ ಶಾಸನಗಳಲ್ಲಿ ಇದು ಮೊದಲನೆಯದು ಎಂಬ ಮಾತುಗಳೂ ಸಹ ಕೇಳಿಬರುತ್ತವೆ. ಈ ಶಾಸನದಲ್ಲಿ ಶಿವನನ್ನು 'ಜಟಾಧಾರಿ', 'ಚಂದ್ರನನ್ನು ಧರಿಸಿದವನು' ಎಂದೆಲ್ಲಾ ವರ್ಣಿಸಲಾಗಿದೆ.[7] (ಅದೇ–ಪು–47) ಕಲ್ಯಾಣದ ಚಾಲುಕ್ಯರು ಅವರ ಸಾಮಂತರಾದ ದೋರಸಮುದ್ರದ ಹೊಯ್ಸಳ ಮನೆತನಗಳ ಆಳ್ವಿಕೆಯ ಕಾಲಾವಧಿಯಲ್ಲಿ ಶೈವ ಧರ್ಮವು ಉಚ್ರಾಯ ಸ್ಥಾನದಲ್ಲಿತ್ತು ಎಂದು ಅವರು ಹೊರಡಿಸಿದ ಶಾಸನಗಳು, ನಿರ್ಮಿಸಿದ ದೇವಾಲಯಗಳಿಂದ ತಿಳಿದುಬರುತ್ತದೆ. ಪ್ರಸ್ತುತ ಸಂಶೋಧನ ಲೇಖನವನ್ನು

Scanned with OKEN Scanner

ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಕಾಲಕ್ಕೆ ಸಂಬಂಧಿಸಿದಂತೆ ಹಾಸನ, ಮೈಸೂರು, ಮಂಡ್ಯ, ಚಿಕ್ಕಮಗಳೂರು ಜಿಲ್ಲೆಗಳಿಗೆ ಸೀಮಿತವಾಗಿರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಕರ್ನಾಟಕದಲ್ಲಿ ಈವರೆಗೆ ಹೊಯ್ಸಳರ ಕಾಲಕ್ಕೆ 1393 ಶಾಸನಗಳು ಲಭ್ಯವಾಗಿದ್ದು, 640 ಶೈವ ಶಾಸನಗಳು, 220 ವೈಷ್ಣವ ಶಾಸನಗಳು, 128 ಜೈನ ಶಾಸನಗಳು, 264 ವೀರಗಲ್ಲು ಶಾಸನಗಳು ಕಂಡುಬಂದಿರುತ್ತವೆ. ಉಳಿದ 141 ಶಾಸನಗಳು ಸಂಕೀರ್ಣತೆಯಿಂದ ಕೂಡಿವೆ. ಅವುಗಳು ಸಾಕಷ್ಟು ತೃಟಿತಗೊಂಡಿರುವುದರಿಂದ ಯಾವ ಧರ್ಮದ ಶಾಸನವೆಂದು ಗುರುತಿಸುವುದು ತುಂಬಾ ತೊಂದರೆಯಾಗಿದೆ. ಈ ಶಾಸನಗಳ ಹಿನ್ನೆಲೆಯಲ್ಲಿ ಆ ಭಾಗದಲ್ಲಿ ಎರಡನೆಯ ಬಲ್ಲಾಳನ ಕಾಲದಲ್ಲಿ ಶೈವಧರ್ಮವು ಹೇಗೆ ಜನಪ್ರೀಯತೆಯನ್ನು ಪಡೆದುಕೊಂಡಿತ್ತು ಎಂಬುದನ್ನು ಈ ಸಂಶೋಧನಾ ಲೇಖನದಿಂದ ತಿಳಿಸಲು ಪ್ರಯತ್ನಿಸುವೆ.

ಶೈವಧರ್ಮವು ಹೊಯ್ಸಳರ ಕಾಲದಲ್ಲಿ ಹೆಚ್ಚು ಪ್ರಗತಿಯನ್ನು ಕಂಡುಕೊಂಡಿತ್ತು ಎಂಬುದು ಸ್ಪಷ್ಟವಗಿ ತಿಳಿದುಬರುತ್ತದೆ. ಅದರಲ್ಲೂ ಎರಡನೆಯ ಬಲ್ಲಾಳನ ಕಾಲದಲ್ಲಿ ಶೈವಧರ್ಮವು ಶ್ರೀಮಂತಿಕೆಯ ಪರಾಕಾಷ್ಟತೆಯನ್ನು ಹೊಂದಿತ್ತು. ಏಕೆಂದರೆ ಈ ಅರಸನ ಕಾಲದಲ್ಲಿ ಹೊರಡಿಸಲಾದ ಶಾಸನಗಳಲ್ಲಿ ಒಟ್ಟು 209 ಶೈವ ಶಾಸನಗಳು ಈ ಜಿಲ್ಲೆಗಳಲ್ಲಿ ದೊರೆತಿವೆ. ಈತನ ಕಾಲದಲ್ಲಿ ಹಾಸನ ಜಿಲ್ಲೆಯಲ್ಲಿ ಶೈವಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಲಾಗಿತ್ತು ಎಂಬುದನ್ನು ಸಹ ಕಾಣಬಹುದಾಗಿದೆ ಅಂದರೆ ಹಾಸನ ಜಿಲ್ಲೆ ಒಂದರಲ್ಲಿಯೇ 97 ಶೈವ ಶಾಸನಗಳು ಪತ್ತೆಯಾಗಿವೆ. 42ವೈಷ್ಣವ 28 ಜೈನ, 77 ವೀರಗಲ್ಲುಗಳು, 19 ಸ್ಪಷ್ಟವಾಗಿ ಗುರುತಿಸಲಾಗದ ಶಾಸನಗಳು ಲಭ್ಯವಾಗಿವೆ. ಇದರಿಂದ ಬಲ್ಲಾಳನ ಕಾಲದಲ್ಲಿ ಶೈವಧರ್ಮವು ಜನಪ್ರೀಯತೆಯನ್ನು ಪಡೆದುಕೊಂಡಿತ್ತು ಎಂಬುದು ತಿಳಿಯುವುದು. ಎರಡನೆಯ ಸ್ಥಾನದಲ್ಲಿ ವೈಷ್ಣವ ಧರ್ಮವು ಬೆಳವಣಿಗೆಯನ್ನು ಹೊಂದಿತ್ತು ಎಂಬುದು ದೊರೆತಿರುವ ದಾಖಲೆಗಳಿಂದ ತಿಳಿದುಬರುತ್ತದೆ.

ಎರಡನೆಯ ಬಲ್ಲಾಳನ ಕಾಲಾವಧಿಯಲ್ಲಿ ಶೈವಧರ್ಮವನ್ನು ಬೆಳೆಸಲು ಅರಸರು, ರಾಣಿಯರು, ಮಂತ್ರಿಗಳು, ಸಾಮಂತರು, ಜನಸಾಮಾನ್ಯರು, ಮಹಾಜನರು, ವ್ಯಾಪಾರಿಸಂಘದವರು, ಪಂಡಿತೋತ್ತಮರು, ಭೂಮಿ, ಗದ್ದೆ, ತೋಟ, ಸುಂಕದ ಆದಾಯ, ಗಾಣ, ಗ್ರಾಮ, ನಿವೇಶನ, ಮನೆ, ಹಣ, ಮಗ್ಗಗಳು ಮತ್ತು ಅಡಿಕೆ, ಎಲೆ, ಹಣ್ಣು, ಧಾನ್ಯ ಮುಂತಾದ ವಸ್ತುಗಳನ್ನು ವಿವಿಧ ಸಂದರ್ಭಗಳಲ್ಲಿ ದಾನ ನೀಡಿದ ಉದಾಹರಣೆಗಳು ಶಾಸನಗಳಲ್ಲಿ ಕೊರೆಯಲಾಗಿದೆ. ಮೇಲಿನ ಕೋಷ್ಟಕವನ್ನು ಅವಲೋಕಿಸಲಾಗಿ 127 ಶಾಸನಗಳಲ್ಲಿ ಭೂಮಿಯನ್ನು ದಾನವಾಗಿ ಕೊಟ್ಟಿರುವ ಉಲ್ಲೇಖಗಳಿದ್ದರೆ, ಗದ್ದೆ 41, ತೋಟ 06, ತೆರಿಗೆಗಳಿಂದ ಬಂದಿರುವ ಆದಾಯವನ್ನು ಬಿಟ್ಟುಕೊಟ್ಟ ಉಲ್ಲೇಖ 12 ಶಾಸನಗಳಲ್ಲಿ ಗಾಣ ಬಿಟ್ಟದ್ದು 17, ಗ್ರಾಂ 14, ಮನೆ/ನಿವೇಶನ 03, ಹಣ 13, ನೇಕಾರರು ಮಗ್ಗವನ್ನು ದಾನವಾಗಿ ನೀಡಿದ ಉಲ್ಲೇಖ ಒಂದು ಶಾಸನದಲ್ಲಿ ಲಭ್ಯವಾಗಿದೆ.

Scanned with OKEN Scanner

ಅರಸನು ಮಾಡಿದ ದಾನದ ಉಲ್ಲೇಖವಿರುವ ಶಾಸನಗಳು 18, ರಾಣಿಯರು 06, ಅಧಿಕಾರಿಗಳು 26, ಜನಸಾಮಾನ್ಯರು ನೀಡಿದ ದಾನದ ಬಗ್ಗೆ 14 ಶಾಸನಗಳು, ವ್ಯಾಪಾರಿ ಸಂಘದವರು 06, ಶಿಕ್ಷಣ ಕೇಂದ್ರಗಳಲ್ಲಿರುವ ಮಹಾಜನರು ನೀಡಿದ ದಾನದ ಕುರಿತಾಗಿ 07 ಶಾಸನಗಳಲ್ಲಿ, ಸಾಮಂತರ ಬಗ್ಗೆ 22, ಗ್ರಾಮೀಣ ಭಾಗದ ಗೌಡರು ಮತ್ತು ಅವರ ಪರಿವಾರದವರು ನೀಡಿದ ದಾನದ ಬಗ್ಗೆ 41 ಶಾಸನಗಳು ಮಾಹಿತಿ ಒದಗಿಸುತ್ತವೆ. ಸಾಮಾನ್ಯ ಮಹಿಳೆಯರು 04 ಮತ್ತು ಗಾಣಿಗರು ನೀಡಿದ ದಾನದ ಬಗ್ಗೆ 1 ಶಾಸನಗಳು ಕಂಡುಬರುತ್ತವೆ. ಈ ಶಾಸನೋಕ್ತ ಮಾಹಿತಿಯಿಂದ ಅಂದ ಶೈವಧರ್ಮವನ್ನು ಆರಾಧಿಸುವ ಗ್ರಾಮೀಣ ಭಾಗದ ಜನರೇ ಹೆಚ್ಚು ಏಕೆಂದರೆ ಗ್ರಾಮೀಣ ನಾಯಕನಾದ ಗಾವುಂಡನು ಶೈವಧರ್ಮದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದನೆಂಬುದು ತಿಳಿದುಬರುತ್ತದೆ. ಈ ದಾನಗಳನ್ನು ಸಾಮಾನ್ಯವಾಗಿ ಸಂಕ್ರಮಣ, ಸೂರ್ಯಗ್ರಹಣ, ಚಂದ್ರಗ್ರಹಣದ ಸಂದರ್ಭದಲ್ಲಿ ಹೆಚ್ಚಾಗಿ ನೀಡುತ್ತಿದ್ದರು ಎಂಬುದರ ಬಗ್ಗೆ ಶಾಸನಗಳಲ್ಲಿ ದಾಖಲೆಗಳಿವೆ.

ಉದಾ : ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಕುಪ್ಪೇಹಾಳದಲ್ಲಿ ಪತ್ತೆಯಾದ ಕ್ರಿ.ಶ. 22.07.1173 ಕಾಲದ ಶಾಸನದಲ್ಲಿ ಎರಡನೆಯ ಬಲ್ಲಾಳನು ದೊರಸಮುದ್ರದಲ್ಲಿ ಪಟ್ಟಾಭಿಷೇಕ ಸಮಾರಂಭವನ್ನು ಏರ್ಪಡಿಸಿದ ಸಂದರ್ಭದಲ್ಲಿ ವಿಜಯ ಸಂವತ್ಸರದ ಶ್ರಾವಣ ಶುದ್ಧ ದಿನದಂದು ಆಸಂದಿನಾಡೊಳಗಿನ ಕುಪ್ಪೆಹಾಳವನ್ನು ಧಾರೆಯೆರೆದು ಸೌರಾಷ್ಟ್ರದ ಸೋಮನಾಥ ದೇವರಿಗೆ ದತ್ತಿಯಾಗಿ ಬಿಟ್ಟು ಚಂದ್ರ ಸೂರ್ಯ ನಕ್ಷತ್ರಗಳಿರುವವರೆಗೂ ಸಲುವುವಂತೆ ದೇವದಾನವಾಗಿ ನೀಡಲಾಯಿತು. ಅಲ್ಲದೇ ಗೌಡರು, ಸೇನುಭೋವ, ಸಆಂತಿಯಣ್ಣನ ಮಗ ಮಾಳಗೌಡ, ಚಿಕನಗೌಡನ ಮಗ ದಾನ ನೀಡಿದ ವಿವರ, ಸೋಮನಾಥ ದೇವರ ಪಾದಾರಾಧಕ ಮಾಳಗಿಜೀಯರ ಅಳಿಯ ನಾಗದೇವನು ಕೆರೆಯನ್ನು ಕಟ್ಟಿಸಿ ಕಂಬವನ್ನು ಪ್ರತಿಷ್ಠೆಮಾಡಿ ನಂದಿಕೇಶ್ವರ ದೇವರಿಗೆ ಭೂಮಿಯನ್ನು [100 ಕಂಬ] ದಾನ ನೀಡಿದ ಮಾಹಿತಿಯನ್ನು ರುದ್ರದೇವ ಎಂಬ ಶಿಲ್ಪಿಯು ಶಾಸನ ಬರೆದರೆ ಅಬ್ಬೋಜನು ಕಂಡರಿಸಿದ ಮಾಹಿತಿಯು ಇದೆ. ಈ ಶಾಸನದಲ್ಲಿ ಭದ್ರಮಸ್ತು ಶಿವಶಾಸನಾಯ ಮಂಗಳಂ ಎಂಬ ಉಲ್ಲೇಖವೂ ಕಂಡುಬರುವುದು.ಜನಸಾಮಾನ್ಯರು, ಮಹಾಜನರು, ವ್ಯಾಪಾರಿಸಂಘದವರು, [**Inscriptions of Hoysala Vol. III. Part I. No.357. P-16-18. 48|VI**

ಈ ಅರಸನ ಆಳ್ವಿಕೆಯ ಅವಧಿಯಲ್ಲಿ ಕಾಳಾಮುಖ ಶೈವಪಂಥವು ಬೆಳವಣಿಗೆಯನ್ನು ಕಂಡುಕೊಂಡಿತ್ತು ಎಂಬುದು ತಿಳಿದುಬರುತ್ತದೆ. ಅಂದರೆ ಅಂದು ಕಾಳಾಮುಖ ಶೈವ ಮುನಿಗಳು ರಾಜಾಶ್ರಯ ಪಡೆದುಕೊಂಡಿದ್ದರೆಂಬುದು ಶಾಸನಗಳ ಮಾಹಿತಿ. ಇವರು ದೇವಾಲಯಗಳ ಸ್ಥಾನಾಚಾರ್ಯರಾಗಿ, ರಾಜಗುರುಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದರು.

ಕ್ರಿ.ಶ. 16ನೇ ಫೆಬ್ರುವರಿ 1174 ರ ಹಾಸನ ಜಿಲ್ಲೆಯ ಅರಸಿಕೆರೆ ತಾಲೂಕಿ ಹಿರೀಕಲ್ಲುಬೆಟ್ಟ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಶಿವಪಾದಶೇಖರ ಅರಸಿಕೆರೆಯ ಹೆಗ್ಗಡೆಗಳು, ಸಮಸ್ತಪ್ರಜೆಗಳು, ಗೌಡರು ಅರೆಯ ಸಂಕರದೇವರ ನೈವೇದ್ಯ, ನಂದಾದೀಪ, ಅಂಗ-ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಉತ್ತರಾಯಣ ಸಂಕ್ರಮಣದಂದು ನಾಗರಾಶಿ ಪಂಡಿತರ ಕಾಲು ತೊಳೆದು ಅಗ್ಗುಳಿಯಕೆರೆಯ ಕೆಳಗೆ 1 ಸಲಗೆ ಗದ್ದೆ, 100 ಕಮ್ಮ ಒಣಭೂಮಿ, ನಾಗದೇವಿಯಲು ಚಮ್ಮಾವುಗೆಯ ಮಹಾದೇವನು, ಬಮ್ಮಗೌಡ, ಸಮಸ್ತ ಪ್ರಜೆಗಳೊಂದಿಗೆ ಹಿರಿಯ ಕೆರೆಯ ಕೆಳಗೆ 1 ಗದ್ದೆ, 10ಕೊಳಗ ಒಣಭೂಮಿ, ಬಮ್ಮೆಯನಹಳ್ಳಿಯ ಸೋಮಗೌಡನು ಹೊಲಗಟ್ಟದ ಕೆಳಗೆ 1 ಸಲಗೆ ಗದ್ದೆ, 1೦ ಕೊಳಗ ಒಣಭೂಮಿ, ಆಗ್ಗುಂದದ ಪ್ರಜೆಗಳು ಗೌಡರು ಊರ ಮುಂದಿನ ಹಳುಗಿನ 1 ಗದ್ದೆ, 10 ಕೊಳಗ ಭೂಮಿ, ಗೀಜೆಹಳ್ಳಿಯ ಮಾಚಗೌಡನು 10 ಕೊಳಗ ಗದ್ದೆ, ಕಾಡುವಿಟ್ಟೆಯ ಕೆರೆಯ ಬೀರಗೌಡನು 10 ಕೊಳಗ ಗದ್ದೆಯನ್ನು, ಸಮಸ್ತ ನಖರರು, ಹಗರಿಟ್ಟಗೆಯ ನಾಗೇಶ್ವರ ದೇವರ ಕುಂದಜೀಯನ ಮಗ ಪದ್ಮಶಿವ ಪಂಡಿತರ ಶಿಷ್ಯ ಕಾಳಾಮುಖ ಯತಿ ನಗರಾಶಿಯ ಶಿಷ್ಯ ಮಾದಜೀಯ 12 ಕೈಯ ಮನೆಗೆ ತೆರೆ ಮಾನ್ಯ ಮಾಡಿದ ಉಲ್ಲೇಖ **[Inscriptions of Hoysala vol-3 Part I. No. 374. P-59. 129 [V. AK. 69] EC- X. P-167-171]**

ಕ್ರಿ.ಶ.07.09.1177 ರ ಕಾಲದಲ್ಲಿ ಹೊರಡಿಸಲಾದ ಹಾಸನ ಜಿಲ್ಲೆಯ ಅರಸಿಕೆರೆ ತಾಲೂಕಿನ ಜಯಚಾಮರಾಜಪುರ [ಹಲಕೂರು]ಹಲಕೂರು ಮಹಾಪ್ರಭು ನರಸಿಂಗಗೌಡ, ಮುದ್ದಗೌಡ, ದಾಸಗೌಡ, ಚಿಕ್ಕಗೌಡರನ್ನೊಳಗೊಂಡು ಸಮಸ್ತ ಪ್ರಜೆಗಳು ಮತ್ತು ಗೌಡರುಗಳು ಉತ್ತರಾಯಣ ಸಂಕ್ರಮಣ, ಚಂದ್ರಗ್ರಹಣದಂದು ಶ್ರೀಕಲಿದೇವರ ನೈವೇದ್ಯ, ನಂದಾದೀವಿಗೆ, ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಮಠದ ತಪೋಧನರ ಆಹಾರಕ್ಕೆ, ಲಾಕುಳಾಗಮ ಸಮಯುಸಮುದ್ಧರಣ ಎಕ್ಕೋಡಿಮುನಿಂದ್ರರ ವಂದನಾನಂದರಾದ ಕಾಳಾಮುಖ ಪ್ರತಿಬದ್ಧರು, ಕೇತಜೀಯರ ಶಿಷ್ಯ ದೇವೇಂದ್ರಶಕ್ತಿ ಪಂಡಿತರು ಇವರಶಿಷೆ ದೇಕವ್ವೆ, ರಾಮಶಕ್ತಿ ಪಂಡಿತರ ಶಿಷ್ಯ ಕಲ್ಯಾಣಶಕ್ತಿ ಇವರ ಶಿಷ್ಯ ವಾಮಶಕ್ತಿ ಇವರ ಶಿಷ್ಯ ಮಹಾದೇವಜೀಯ ಶಿಷ್ಯ ಚಿಕ್ಕಕಲಜೀಯ ಈ ಎಲ್ಲಾ ಮುನಿ ಸಮೂಹದ ಪಾದಪೂಜೆ ಮಾಡಿ ದೇವರಿಗೆ ದತ್ತಿ ಬಿಟ್ಟ ಮಾಹಿತಿ ಇದೆ. ದೇವರ ಮುಂದಿನ ಹಿರಿಯ ಕೆರೆಯ ಕೆಳಗೆ 4 ಸಲಗೆ ಗದ್ದೆ, ಮತ್ತಿಯ ಕೆರೆಯ ಕೆಳಗೆ 1 ಸಲಗೆ ಗದ್ದೆ, ಬಬ್ಬಿಯ ಕೆರೆಯ ಕೆಳಗೆ 5 ಕೊಳಗ, ಆನೆಯ ಕೆರೆಯ ಕೆಳಗೆ 5 ಸಲಗೆ ಗದ್ದೆ, ದೇವರ ಮುಂದಿನ ಕೆರೆಯ ಕೆಳಗೆ ತೋಟದ ಸ್ಥಳದ ನಡುವೆ 600 ಒಣಭೂಮಿ. ವಿನಾಯಕನ ಮುಂದಿನ ಹಾಳಕೆರೆಯ 200 ಕಮ್ಮ, ಪೂರ್ವಕ್ಕೆ 200 ಕಮ್ಮ ತೋಟವನ್ನು ದಾನವಾಗಿ ಬಿಟ್ಟ ಮಾಹಿತಿಯನ್ನು ನೀಡುವ ಶಾಸನ ಇದಾಗಿದೆ. **[Inscriptions of Hoysala Vol. III. Part I. No.400. P-94-98, 96[V. AK. 62] EC-X . P-126-131]**

Scanned with OKEN Scanner

ಕ್ರಿ.ಶ. 25.12.1181 ರಲ್ಲಿ ಹೊರಡಿಸಲಾದ ಅರಸಿಕೆರೆ ತಾಲೂಕಿನ ಕೆಂಗಲ್ ಗ್ರಾಮದ ಶಾಸನದಲ್ಲಿ ರಾಜಧಾನಿ ಅರಸಿಕೆರೆಯ ನಖರರು, ಸಾವಿರ ಒಕ್ಕಲರು, ಕಾಳಾಮುಖ ತ್ರಿಭುವನಶಕ್ತಿ ಪಂಡಿತರ ಶಿಷ್ಯ ಧರ್ಮರಾಶಿ ಪಂಡಿತರು ಧರ್ಮೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿ ಕೆರೆಯನ್ನು ಕಟ್ಟಿಸುವಂತೆ ನಿಯೋಜಿಸಿ ದೇವರ ನಿತ್ಯ ನೈವೇದ್ಯ ಜೀರ್ಣೋದ್ಧರಕ್ಕೆಂದು ಧರ್ಮರಾಶಿ ಪಂಡಿತರ ಕಾಲ್ತೊಳೆದು ಪುಷ್ಯಮಾಸದ ಉತ್ತರಾಯಣ ಸಂಕ್ರಮಣದಂದು ಬಿಟ್ಟ ದಾನ. ಧರ್ಮರಾಶಿ ಕಟ್ಟಿಸಿದ ಕೆರೆಯ ಕೆಳಗೆ 4 ದಿಕ್ಕಿನಲ್ಲಿ ನೆಟ್ಟ ಕಲ್ಲು ಸೀಮೆಯಲ್ಲಿ ಸುಗ್ಗಣ್ಣ ಮಾರೆಯ ಕೆರೆಯಲ್ಲಿ 100 ಕಂಬ ಭೂಮಿ, ಹರಳ ಭೂಮಿ 400 ಕಂಬ, ಮಹಾಪ್ರಧಾನ ಕಲ್ಲಿಮಯ್ಯ 1 ಗದ್ದೆ, ನಾಕಿಗೌಡ ಬಮ್ಮಯ್ಯ 1 ಗದ್ದೆ, ಮಾಳನಗೌಡನ ಚಿಕ್ಕ ಬಮ್ಮ 1 ಗದ್ದೆ, ಜಕ್ಕಗೌಡನ ಮಾಳ 1 ಗದ್ದೆ, ಕಾಳಿಸೆಟ್ಟಿ ಮಗ ಸಿಂಘಬಮ್ಮ 1 ಗದ್ದೆ, ಬೆಳ್ಳೀಯ ಮಾರೆಯ 1 ಗದ್ದೆ, ರಾಮನಗೌಡನ ದಾಸ 5 ಗದ್ದೆ, ಹೊನ್ನರಸನ ಮಸಣಯ್ಯ 1 ಗದ್ದೆ, ದದ್ದಿಯ ಬಮ್ಮೇಯ 1ಗದ್ದೆ, ಚಿಕ್ಕಣ ಬಮ್ಮ 1 ಗದ್ದೆ, ಬಸನಗೌಡನ ಮಾದೆಯ 1 ಗದ್ದೆ, ಭಂಡಿಯ ಅಜ್ಜೇಯ 1 ಗದ್ದೆ, ಗೌಳಿಯ ಕಂಚಿಯ 1 ಗದ್ದೆ, ಮಾಲೆಗಾರ ಚಿಕ್ಕಣ 1 ಗದ್ದೆ, ಸರವಿಯ ಕಾಳೆಯ 1 ಗದ್ದೆ, ಮೈಲರಸ 1 ಗದ್ದೆ ಲೆಮ್ಮಿಯಣ್ಣ 1 ಗದ್ದೆ, ಹರಿಪರಸ 1 ಗದ್ದೆ, ಮುದ್ದಿಗೌಡಿಯ 1 ಗದ್ದೆ. ದಾನ. **[Inscriptions of Hoysala Vol. III. Part I. No.435. P-153-155. 325 [Kengall] EC-X.P-403-405]**

**ಬಲ್ಲಾಳರಸನ ವ್ಯಕ್ತಿತ್ವ :**

ಶಾಸನಗಳಲ್ಲಿ ಅರಸರ ಪಾಂಡಿತ್ಯ ಮತ್ತು ವ್ಯಕ್ತಿತ್ವವನ್ನು ವರ್ಣಿಸಿರುವುದನ್ನು ಕಾಣಬಹುದಾಗಿದೆ. ಉದಾ: ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಚಟ್ಟನಹಳ್ಳಿಯಲ್ಲಿ ದೊರೆತಿರುವ ಕ್ರಿ.ಶ. 26.12.1194 ಶಾಸನದಲ್ಲಿ ವೀರಬಲ್ಲಾಳನ **ವರ್ಣನೆಯನ್ನು ಮಾಡಿದ ಶಾಸನ:** ಸಂಗೀತ ಪ್ರಸಂಗ ಭಂಗ ಈ ಸಂಗತ ಚತುರಚರಿತ ತರ್ಕವಿದ್ಯಾವಿಶಾರದ ವಿಚಾರ ನಿರತ ಶಬ್ದವಿದ್ಯಾಸಮಗ್ರ ಲಕ್ಷಣ ಸುಶೀಕ್ಷಿತ, ವೇದವಿದ್ಯಾಪರೀಕ್ಷಾ ಅಧ್ಯಕ್ಷನು ಸಕಲ ಪುರಾಣ ಪುಂಜಿತಾರ್ಥ ರತ್ನಪ್ರಕಾಶ ಶಾರ್ದೂಲ ಲಾಂಛನನು, ಪದ್ಮಸದ್ಮತಪತ್ಪೂರ್ತ ವೇದಪರ್ವತಾದೀಶ್ವರನು ಮಲೇಪರೋಳ್ಗಂಡ ಎಂಬ ಉಲ್ಲೇಖವನ್ನೊಳಗೊಂಡಿದೆ. Inscriptions of Hoysala Vol. III. Part I. No. 518. P-316. 91 [VI. KD 77. EC-XII. P-104-106

**ದೇವಾಲಯಗಳು :**

ಎರಡನೆಯ ಬಲ್ಲಾಳನ ಕಾಲದಲ್ಲಿ ಶೈವ ದೇವಾಲಯಗಳನ್ನು ನಿರ್ಮಾಣ ಮಾಡುವುದರ ಮೂಲಕ ಶೈವಧರ್ಮದ ಪ್ರಭಾವವನ್ನು ಮತ್ತಷ್ಟು ಬೆಳೆಸಲು ಪ್ರೋತ್ಸಾಹ ನೀಡಲಾಗಿತ್ತು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ. ಅರಸನ ಅಪ್ಪನೆಯ ಮೇರೆಗೆ ಅರಸ, ರಾಣಿಯರು, ವ್ಯಾಪಾರಿಗಳು, ಮಹಿಳೆಯರು, ಪಂಡಿತರು ತಮ್ಮ ಹೆಸರುಗಳಲ್ಲಿ, ತಮ್ಮ ತಂದೆ-ತಾಯಿಗಳಿಗೆ ಪರೋಕ್ಷ ವಿನಯವಾಗಿ, ತಮಗೆ ಒಳ್ಳೆಯದಾಗಲಿ ಎಂಬ ವಿವಿಧ ಉದ್ದೇಶವನ್ನಿಟ್ಟುಕೊಂಡು ಶೈವ ದೇವಾಲಯಗಳನ್ನು

ನಿರ್ಮಿಸುತ್ತಿದ್ದರು. ಈ ಅರಸನ ಕಾಲದಲ್ಲಿ ನಿರ್ಮಾಣಗೊಂಡ ಶೈವ ದೇವಾಲಯಗಳ ಪಟ್ಟಿಯನ್ನು ಈ ಕೆಳಗಿನಂತೆ ಕೊಡಲಾಗಿದೆ. ಈ ಪಟ್ಟಿ ಕೇವಲ ಹಾಸನ, ಮಂಡ್ಯ, ಮೈಸೂರು, ಚಿಕ್ಕಮಗಳೂರು ಜಿಲ್ಲೆಗಳಿಗೆ ಮಾತ್ರ ಸೀಮಿತವಾದ ಮಾಹಿತಿಯನ್ನು ಒಳಗೊಂಡಿದೆ. ಈ ಕೋಷ್ಟಕದಲ್ಲಿ ಅರಸನು ನಿರ್ಮಿಸಿದ ದೇವಾಲಯಗಳ ಉಲ್ಲೇಖವಿರುವ ಶಾಸನಗಳು 04, ಸಾಮಂತರು 04, ವ್ಯಾಪಾರಿಗಳು 02, ಗಾವುಂಡರು 06, ಮಹಾಜನರು 02, ಅಧಿಕಾರಿಗಳು (ದಂಡನಾಯಕರು, ಮಹಾಪಸಾಯತ, ಸೇನುಭೋವ, ಹೆಗ್ಗಡೆ ಮುಂತಾದವರು) 19, ಶೈವಮುನಿಗಳು 03 ದೇವಾಲಯಗಳನ್ನು ನಿರ್ಮಾಣ ಮಾಡಿಸಿದರೆಂಬ ಉಲ್ಲೇಖಗಳು ಶಾಸನಗಳಲ್ಲಿ ಕಂಡುಬರುತ್ತವೆ.

**KD. 04| EC-XII. P-65-68|.** ಕಡೂರು ತಾಲೂಕಿನ ಹಿರಿಯೂರಿನ ಕ್ರಿ.ಶ. 22.07.1173 ಶಾಸನದಲ್ಲಿ ಹಿರಿಯೂರಿನ ನಡಪ್ರಭುವಾದ ಸಂಕಗೌಡನು ಮೂಲಸ್ಥಾನ ಕಲಿದೇವರ ದೇವಾಲಯದ ಜೀರ್ಣೋದ್ಧಾರಕ್ಕೆ ಸಾವಿಶೆಟ್ಟಿ ಮತ್ತು ಹಿರಿಯ ಮಾಳವ್ವೆಯರ ಮಗನಾದ ಹಂಪಜೀಯಗೆ ಮೊದಲೇರಿಯ 4 ಸಲಗೆ ಗದ್ದೆ, ಕೆರೆಯ ಪರೆಯ ಕೈಯಿ ಹೊಲಗೆರೆಯ ಹಿಂದೆ 1 ಸಲಗೆ 10 ಕೊಳಗ ಗದ್ದೆ, ದೇವಾಲಯದ ದಕ್ಷಿಣ ದಿಕ್ಕಿನಲ್ಲಿ 15 ಸಲಗೆ ಗದ್ದೆ, ಹಿತ್ತಲ ಕೆಂಗಾಡಿನ ಕೈಯ 1 ಸಲಗೆ, ತವಸಿಯ ಕೆಯ ಕೊಳಗ 10 ನ್ನು ಧಾರಾಪೂರ್ವಕವಾಗಿ ಬಿಟ್ಟ ಉಲ್ಲೇಖವಿದೆ. ಸಂಕಗೌಡನ ಮಕ್ಕಳಾದ ಮಲ್ಲಗೌಡ, ಮಾದಿಗೌಡ, ಅಜಗೌಡ, ಬೊಪ್ಪಗೌಡ,ಚಟ್ಟಗೌಡ, ಮಾಕಗೌಡ ಮುಂತಾದವರು ಆ ಕಲಿದೇವರ ದೇವಾಲಯದ ಜೀರ್ಣೋದ್ಧಾರಕ್ಕೆ ಕೊಟ್ಟ ಗದ್ದೆಯ ವಿವರ. Inscriptions of Hoysala Vol. III. Part I. No.360. P-22. 237 [VI KD. 134] EC-XII. P-261-264

ಈ ಕೆಳಗಿನ ಕೋಷ್ಟಕವನ್ನು ಅವಲೋಕಿಸಿದಾಗ ಎರಡನೆಯ ಬಲ್ಲಾಳನ ಕಾಲದಲ್ಲಿ ಹೊರಡಿಸಲಾದ ಹಾಸನ, ಮಂಡ್ಯ, ಮೈಸೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಲಭ್ಯವಾಗಿರುವ ಶಾಸನಗಳ ಪ್ರಕಾರ 51 ಶಾಸನಗಳಲ್ಲಿ ಸಂಕ್ರಮಣದಂದು ದಾನ ನೀಡಿದ ಉಲ್ಲೇಖಗಳಿದ್ದರೆ; 04 ಸೂರ್ಯಗ್ರಹಣದಂದು ಮತ್ತು 02 ಚಂದ್ರಗ್ರಹಣದ ಸಂದರ್ಭದಲ್ಲಿ ದಾನ ನೀಡಿದ ದಾಖಲೆಗಳಿವೆ.

**ಸಮಾರೋಪ :**

ಮೇಲ್ಕಾಣಿಸಿದ ಎಲ್ಲಾ ಮಾಹಿತಿಗಳನ್ನು ಅವಲೋಕನ ಮಾಡಿದಾಗ ಕರ್ನಾಟಕವನ್ನು ಆಳಿಹೋದ ಹೊಯ್ಸಳ ಅರಸರ ಕಾಲದಲ್ಲಿ ಎರಡನೆಯ ಬಲ್ಲಾಳನ ಕಾಲ ಶೈವಧರ್ಮದ ಅಭಿವೃದ್ಧಿಯ ಪರ್ವಕಾಲವಾಗಿತ್ತು ಎಂಬುದು ಶಾಸನಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಆಳ್ವಿಕೆಯನ್ನು ಆರಂಭಿಸಿದ ಹೊಯ್ಸಳರು ಸರ್ವ ಕ್ಷೇತ್ರಗಳನ್ನು ಬೆಂಬಲಿಸಿದಂತೆ ಹಿಂದೂ ಧರ್ಮದ ಶಾಖೆಯಾದ ಶೈವಧರ್ಮದ ಪ್ರಗತಿಗೆ ಅವಿಶ್ರಾಂತವಾಗಿ ಶ್ರಮಿಸಿದ್ದರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇವರ ಕಾಲದ ಶೈವಧರ್ಮದ ಬಗ್ಗೆ ಇನ್ನೂ ಹಲವಾರು ಸಂಶೋಧನೆಗಳು ಶಾಸನೋಕ್ತವಾಗಿ ನಡೆಯಬೇಕು ಎಂಬುದೇ ಈ ಲೇಖನದ ಆಶಯ.

Scanned with OKEN Scanner

ಗ್ರಂಥಋಣ :
ಕಡಪಟ್ಟಿ ಎಂ. ಎನ್. ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ - ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ ಧಾರವಾಡ- 2007-08

ನಂದಿಮಠ ಸಿ.ಸಿ. ಕರ್ನಾಟಕದ ಧರ್ಮಗಳು

ಶ್ರೀಮತಿ ಕರುಣಾ ವಿಜೆಯೇಂದ್ರ - ಕರ್ನಾಟಕದ ದೇವಾಲಯಗಳಲ್ಲಿ ರಂಗಭೋಗ-ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ ಧಾರವಾಡ- 2007-08

ಕುಲಕರ್ಣಿ ಡಿ.ಜಿ. ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು - ಇತಿಹಾಸ ಸಂಶೋಧನಾ ಮಂಡಲ ಧಾರವಾಡ- 2007-08

ಹಿರೇಮಠ ಎಸ್.ಎಸ್. ಕಾಳಾಮುಖ ದರ್ಶನ - ಸಮತಾ ಪ್ರಕಾಶನ, ಹರಪನಹಳ್ಳಿ, 2004

ಗುರುದತ್ತ ಪ್ರಧಾನ್ (ಸಂ) ಧಾರವಾಡ ಜಿಲ್ಲೆಯ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು

Pattar I.K & Desai H.R Inscriptions of Hoysala vol-3 Part I. & II

ದೇವರಕೊಂಡಾ ರೆಡ್ಡಿ (ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು

ಎ. ಕರ್ನಾಟಿಕಾ ಸಂಪುಟಗಳು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1997ರಿಂದ 2003,

■

Scanned with OKEN Scanner